ಕಾಲನ್ನ ಹೇಗೆ ಕಚ್ಚಿದ್ವು ಅಂದ್ರೆ, ಹೇಳೋಕ್ಕೆ ಕಷ್ಟ ಆಗುತ್ತೆ.'

'ಆದರೂ, ಹೊಸ ವರುಷಕ್ಕೆ ಹೊಸ ಚಪ್ಪಲಿಗಳನ್ನ ಹಾಕ್ಕೊಂಡ್ರಲ್ಲ, ಅದು ಸಂತೋಷದ ವಿಷಯ ಅಲ್ವೆ?'

'... ಆಮೇಲೆ...'

'ಇನ್ನೇನು ಆಮೇಲೆ? ಅಲ್ರೀ, ಹೊಸ ವರುಷದಲ್ಲಿ, ಲೈಫ್‌ನಲ್ಲೇ ಮೊದಲನೇ ಸಾರಿ ನಂಗೆ ಡೆಂಗೆ ಜ್ವರ ಬಂತು ಅಂತಿದ್ರೀ, ಮರೆತುಬಿಟ್ರಾ?'

'ಅಯ್ಯೋ, ಅದನ್ನ ಮರೆಯೋಕ್ಕೆ ಆಗುತ್ಯೆ? ಅದನ್ನ ನೆನೆಸಿಕೊಂಡ್ರೆ ಈಗಲೂ ಜ್ವರ ಬಂದ ಹಾಗೇ ಆಗುತ್ತೆ.'

'ಈಗ ನೋಡ್ತಾ ಇದೀನಿ. ನಿಮ್ಮ ಮೊಬೈಲ್ ಫೋನ್ ಹೊಸದೇ?'

'ಹೂ, ರೀ. ಮೊನ್ನೆ ನಮ್ಮ ಯಜಮಾನರ ಜೊತೆ ದರ್ಶಿನೀಲಿ ದೋಸೆ ತಿನ್ನೋಕ್ಕೆ ಅಂತ ಹೋದಾಗ ಅಲ್ಲೇ ನನ್ನ ಫೋನ್ ಮರೆತುಬಂದೆ. ಆಮೇಲೆ ಸಿಗಲೇ ಇಲ್ಲ. ನಿನಗೆ ಸ್ಮಾರ್ಟ್ ಫೋನ್ ತೆಕ್ಕೊಡೋದು ದಂಡ ಅಂತ ಕೋಪಿಸಿಕೊಂಡು ನನ್ನ ಯಜಮಾನ್ರು ಆರ್ಡಿನರಿ ಫೋನ್ ತೆಕ್ಕೊಟ್ರು. ಈಗ ನನ್ನ ವಾಟ್ಸ್‌ಆ್ಯಪ್ ಗ್ರೂಪ್ ಜೊತೆ ಸಂಪರ್ಕ ಇಲ್ಲದೆ ಒದ್ದಾಟ ಆಗ್ತಾ ಇದೆ.'

'ಅಯ್ಯೋ ದೇವರೇ! ಪಾಪ, ವಾಟ್ಸ್‌ಆ್ಯಪ್‌ನಲ್ಲಿ ಇಲ್ಲದೆ, ಈ ಹೊಸ ವರ್ಷಾನ ನೀವು ತಾನೆ ಹ್ಯಾಗೆ ಕಳೀತೀರೋ ಏನೋ? ಅಂದಹಾಗೆ, ಹೊಸ ವರುಷ, ಹೊಸ ಡಯಟ್ ಮಾಡ್ತೀನಿ, ಐದು ಕೇಜಿ ಇಳಿಸ್ಕೋತೀನಿ ಅಂತ ಮೊನ್ನೆ ಕ್ಲಬ್‌ನಲ್ಲಿ ಹೇಳ್ತಿದ್ರಿ. ಡಯಟ್ ಶುರು ಮಾಡಿದ್ರಾ?'

ಇನ್ನೂ ಇಲ್ಲ ರೀ. ಇನ್ನೊಂದು ತಿಂಗಳು ಕಳೀಲಿ, ಆಮೇಲೆ ಮಾಡೋಣ ಅಂತ ಅಂದ್ಕೊಂಡೀನಿ. ಯುಗಾದಿ ಹಬ್ಬಕ್ಕೆ ಮಾಡಿದ್ದ ಒಬ್ಬಟ್ಟುಗಳು ಇನ್ನೂ ಮಿಕ್ಕಿವೆ. ಅದೆಲ್ಲಾ ತಿಂದು ಮುಗಿದ ಮೇಲೆ ಶುರು ಮಾಡೋಣ ಅಂತ ನನ್ನ ಪ್ಲಾನು.'

'ಈ ವರುಷದಲ್ಲಿ ಒಂದು ದಿನದಲ್ಲೂ ತಪ್ಪಿಸಿಕೊಳ್ಳದೆ ವಾಕ್ ಶುರು ಮಾಡ್ತೀನಿ ಅಂತ ಶೂಸ್ ಕೊಂಡ್ಕೊಂಡ್ರಿ. ಹೇಗಿದೆ ಹೊಸ ವರುಷದಲ್ಲಿ ವಾಕಿಂಗ್ ಅನುಭವ?'

'ಏನು ಹೊಸ ವರುಷವೋ, ಏನು ವಾಕಿಂಗೋ... ಜ್ಞಾಪಿಸಬೇಡಿ ನನಗೆ.'

'ಯಾಕೆ , ಏನಾಯ್ತು?'

'ಮನೆಯಿಂದ ಹೊರಗೆ ಬಂದ್ರೆ ಸಾಕು, ಬೀದಿನಾಯಿಗಳು ನನ್ನನ್ನೇ ಅಟ್ಟಿಸ್ಕೊಂಡು ಬರೋಕ್ಕೆ ಶುರು ಮಾಡಿದ್ವು. ವಾಕಿಂಗ್ ಬಿಟ್ಬುಟ್ಟೆ. ಶೂಸ್ ಮುಂದಿನ ವರುಷಕ್ಕೆ ಆಗುತ್ತೆ ಬಿಡಿ.'

'ಆಗುತ್ತೆ ಆಗುತ್ತೆ, ಶೂಸ್‌ಗಳೇನು, ಒಂದು ವರುಷ ಇಟ್ರೂ ಕೆಡಲ್ಲ. ಅವೇನು ಕೆಡೋಕ್ಕೆ ಒಬ್ಬಟ್ಟುಗಳೇ? ಅಲ್ರೀ, ಹೊಸ ವರುಷದಲ್ಲಿ ಸುಗಮ ಸಂಗೀತ ಕಲೀತೀನಿ ಅಂತ ಯಾವುದೋ ಮೇಡಮ್ ಹತ್ತಿರ ಹೋಗಿದ್ರಲ್ಲ, ಏನಾಯ್ತು?'

'ಮೂರೋ ನಾಲ್ಕೋ ಹಾಡುಗಳನ್ನ ಕಲಿತೆ. ಅಷ್ಟರಲ್ಲಿ ನನಗೆ ಗಂಟಲು ನೋವು ಶುರು ಆಯ್ತು, ಮೇಡಮ್‌ಗೆ ಮೈಗ್ರೇನ್ ಶುರು ಆಯ್ತು ಅಂತ ನಿಲ್ಲಿಸಿಬಿಟ್ಟೆ.'

'ಇಬ್ಬರಿಗೂ ಒಳ್ಳೇದಾಯ್ತು ಬಿಡಿ. ನಾನು ಬರ್ತೀನ್ರೀ.'

'ಅಯ್ಯೋ, ಬನ್ನಿ ಕಾಫಿ ಕುಡ್ಕೊಂಡು ಹೋಗುವರಂತೆ.'

'ಬೇಡಾ ರೀ. ನನಗೂ ಹೊಸ ವರುಷದಿಂದ ಹೈಪರ್ ಅಸಿಡಿಟಿ ಶುರು ಆಗಿದೆ. ಕಾಫೀ, ಟೀ ಎಲ್ಲಾ ಈ ವರ್ಷ ಬಂದ್!'

'ಹೌದೆ? ಬಲವಂತ ಮಾಡಲ್ಲ ಬಿಡಿ. ಸರಿ ಹೋಗಿ ಬನ್ನಿ... ಇದ್ಯಾಕ್ರೀ.. ಹೀಗೆ ಕುಂಟುತಾ ಇದೀರಾ?'

'ನಿಮಗೆ ಹೇಳಲಿಲ್ಲ ಅಂತ ಕಾಣುತ್ತೆ. ಈ ವರುಷ ಹೊಸ ಮಂಡಿ ಹಾಕಿಸ್ಕೊಂಡೆ ರೀ. ನೀ ರೀಪ್ಲೇಸ್ಮೆಂಟ್! ತುಂಬಾ ನೋವಿದೆ.'

'ಒಂದು ನಿಮಿಷ ಇರಿ. ಹಬ್ಬದ ಒಂದೆರಡು ಒಬ್ಬಟ್ಟು ಪ್ಯಾಕ್ ಮಾಡಿ ಕೊಡ್ತೀನಿ. ಮನೇಗೆ ಹೋಗಿ ತಿನ್ನೊವ್ರಂತೆ.'

'ಅಯ್ಯೋ ಬೇಡಾಪ್ಪ. ಹೊಸ ವರುಷದ ಸರ್ಪ್ರೈಸ್ ಅನ್ನೋ ಹಾಗೆ, ಮೊನ್ನೆ ನನ್ನ ಡಾಕ್ಟರ್ ನನಗೆ ಡಯಾಬಿಟೀಸ್ ಇದೆ ಅಂತ ಹೇಳ್ಬಿಟ್ರು. ಇನ್ನು ಮೇಲೆ ಯಾವ ಸ್ವೀಟ್‌ಗಳನ್ನೂ ಮುಟ್ಟೋ ಹಾಗಿಲ್ಲ.'

'ಹೋಗ್ಲಿ ಬಿಡಿ. ಏನೇ ಆಗ್ಲಿ, ಹಾಡಿದ್ದೇ ಹಾಡೋ ಕಿಸಬಾಯಿದಾಸ ಅನ್ನೋ ಹಾಗೆ, ಹ್ಯಾಪಿ ಯುಗಾದಿ, ಹ್ಯಾಪಿ ನ್ಯೂ ಇಯರ್ ಅಂತ ಹೇಳ್ಕೊಂಡು ಹೇಗೋ ಜೀವನ ನಡೆಸೋಣ. ನಾನು ಬರಲೇ?...'

